ಆಗ ಎಂ. ಮರಿಯಪ್ಪ ಭಟ್ಟರು ಕೂಡ ಮದರಾಸಿನಲ್ಲಿದ್ದರು. ಅವರು ಹಳಗನ್ನಡ ವಿದ್ವಾಂಸರು. ಆದರೆ ನಾನು ಹೆಚ್ಚು ಚರ್ಚೆ ಮಾಡುತ್ತಿದ್ದುದು ಕಾರ್ನಾಡರ ಜೊತೆಗೆ. ಆ ವೇಳೆಗಾಗಲೇ ಕಾರ್ನಾಡರು ಅಡಿಗರನ್ನು ಚೆನ್ನಾಗಿ ಓದಿಕೊಂಡಿದ್ದರು. ಇಡೀ 'ಭೂಮಿಗೀತ' ಅವರಿಗೆ ಬಾಯಿಪಾಠವಾಗಿತ್ತು. ಕಾರ್ನಾಡರ ಮೂಲಕ ನಾನು ಅಡಿಗರನ್ನು ಓದಲು ಶುರುಮಾಡಿದ್ದು.''

ರಷ್ಯನ್ ಸಾಹಿತ್ಯಕ್ಕೆ ಹೊರಳಿಕೊಳ್ಳುವ ಮುನ್ನ ಹಾಗೂ ಅಡಿಗರ ಕಾವ್ಯದ ಹುಚ್ಚು ಹತ್ತಿಸಿಕೊಳ್ಳುವ ಮುನ್ನ ಕೆ.ಎಸ್. ನರಸಿಂಹಸ್ವಾಮಿ ಅವರ ಕಾವ್ಯದ ಕುರಿತು ದಿವಾಕರ್ ಪುಸ್ತಕವೊಂದನ್ನು ಬರೆದುದನ್ನು ಎಚ್‌ಎಸ್‌ಆರ್ ನೆನಪಿಸಿಕೊಂಡರು. ''ಅದು ನರಸಿಂಹಸ್ವಾಮಿ ಬಗ್ಗೆ ಕನ್ನಡದಲ್ಲಿ ಬಂದ ಮೊದಲ ಪುಸ್ತಕ. ಕನ್ನಡದಲ್ಲಿ ಅಡಿಗರ ಪ್ರಭಾವ ಇದ್ದ ಸಮಯದಲ್ಲಿ ನೀವು ನರಸಿಂಹಸ್ವಾಮಿ ಬಗ್ಗೆ ಬರೆದದ್ದು ನನಗೆ ಕುತೂಹಲ ಅನ್ನಿಸಿತ್ತು'' ಎಂದರು.

''ಅದು ಮದರಾಸಿಗೆ ಹೋಗುವ ಮುನ್ನ ಬರೆದದ್ದು. ಒಂದು ಕಾಲದಲ್ಲಿ ಭಾವಗೀತೆಗಳನ್ನು ಹಾಡುವ ಹುಚ್ಚಿತ್ತು. ಮಧ್ಯಾಹ್ನ 1ರಿಂದ 1.10ರ ಸಮಯದಲ್ಲಿ ರೇಡಿಯೊದಲ್ಲಿ ಭಾವಗೀತೆಗಳು ಪ್ರಸಾರವಾಗುತ್ತಿದ್ದವು. ಅವುಗಳನ್ನು ಕೇಳಲೆಂದೇ ಆ ಸಮಯದಲ್ಲಿ ಆಫೀಸ್ ಬಿಟ್ಟು ಯಾವುದಾದರೂ ಹೋಟೆಲ್‌ನಲ್ಲಿ ಹಾಜರಾಗುತ್ತಿದ್ದೆ. ರೇಡಿಯೊ ಮೂಲಕವೇ ಕುವೆಂಪು, ಬೇಂದ್ರೆ, ನರಸಿಂಹಸ್ವಾಮಿ ಪರಿಚಯವಾದುದು. ಆಗ ಹತ್ತಿದ ಕೆಎಸ್‌ನ ಹುಚ್ಚೇ ಅವರ ಕುರಿತು ಓದಲು, ಪುಸ್ತಕ ಬರೆಯಲು ಕಾರಣವಾಯಿತು.''

''1971–72ನೇ ಇಸವಿಯಲ್ಲಿ ಚಿ. ಶ್ರೀನಿವಾಸರಾಜು ಅವರ ಜೊತೆ ನಾನು ನರಸಿಂಹಸ್ವಾಮಿ ಕುರಿತು 'ಚಂದನ' ಪುಸ್ತಕ ತರಲು ಹೊರಟಾಗ ನಿಮ್ಮ ಪುಸ್ತಕದ ಬಗ್ಗೆ ಕೇಳಿದ್ದೆವು. ಜಿ.ಎಸ್. ಶಿವರುದ್ರಪ್ಪ ಆ ಕೃತಿಯ ಸಂಪಾದಕರು. ನೀವು 'ಪಾಂಡಿತ್ಯ ಪರಂಪರೆಗೆ ನಾನು ಸೇರಿದವನಲ್ಲ' ಎಂದು ಕೊಂಚ ಸಂಕೋಚಪಟ್ಟಿದ್ದಿರಿ. ಆದರೆ ಕನ್ನಡದಲ್ಲಿ ಅಕಡೆಮಿಕ್ ಆಗಿ ಓದದೆಯೇ ದೊಡ್ಡ ಸಾಧನೆ ಮಾಡಿದವರದೊಂದು – ಡಿವಿಜಿ, ಅನಕೃ, ನಿರಂಜನ ಸೇರಿದಂತೆ – ದೊಡ್ಡ ಪರಂಪರೆಯೇ ಇದೆ. ನವ್ಯದ ಅನೇಕ ಸೃಜನಶೀಲ ಲೇಖಕರಿಗೆ ಹಳಗನ್ನಡ ಸಾಹಿತ್ಯದ ಪರಿಚಯ ಇರಲಿಲ್ಲ, ಇರಬೇಕಾಗಿಲ್ಲ ಅಂತಲೂ ಅನ್ನಿಸುತ್ತದೆ. ಚಿತ್ತಾಲರನ್ನೇ ನೋಡುವುದಾದರೆ – ಅವರು ಪಂಪನನ್ನು ಯಾಕೆ ಓದಿಕೊಂಡಿಲ್ಲ ಎನ್ನುವ ಪ್ರಶ್ನೆಯೇ ಅಸಂಗತ. ಬೇರೆ ಬೇರೆ ಶಾಸ್ತ್ರಗಳನ್ನು ಓದಿಕೊಂಡವರು, ಪಂಡಿತ ಪರಂಪರೆಯಲ್ಲಿ ಕಲಿಯದಿದ್ದರೆ ಅದು ಡಿಸ್‌ಕ್ವಾಲಿಫಿಕೇಷನ್ ಎಂದು ಈಗ ಅನ್ನಿಸ್ತಿಲ್ಲ. ಇವತ್ತಿನ ವಿಶ್ವವಿದ್ಯಾಲಯ ಶಿಕ್ಷಣ ಕ್ರಮದಲ್ಲಿ ಆಗಿರುವ ಬದಲಾವಣೆ ಅದಕ್ಕೆ ಕಾರಣವಿರಬಹುದು. ಆ ಬದಲಾವಣೆ ವಿಶ್ವವಿದ್ಯಾಲಯಗಳ ಆಚೆಗೆ ನಡೆಯುತ್ತಿರುವ ಕೆಲಸವನ್ನು ಹೆಚ್ಚು ಮುತುವರ್ಜಿಯಿಂದ ನೋಡುವಂತೆ ಮಾಡಿದೆ. ಇವತ್ತು ನಾವು ಲಕ್ಷ್ಮೀಶ ತೋಳ್ಪಾಡಿ ಬಗ್ಗೆ ಮಾತನಾಡುವಂತೆ ಯಾವುದೇ ಪ್ರೊಫೆಸರ್ ಬಗ್ಗೆ ಮಾತನಾಡುವುದಿಲ್ಲ. ಪಾಂಡಿತ್ಯ ಎನ್ನುವುದು ವಿವಿ ಆಚೆಗೆ ಏಕೆ ಚಲಿಸಿತು? ಡಿ.ಎಸ್. ನಾಗಭೂಷಣ್ ಮ್ಯಾಥೆಮೆಟಿಕ್ಸ್ ಎಂ.ಎಸ್ಸಿ. ಮಾಡಿ ಬೇರೆ ಬೇರೆ ಕೆಲಸ ಮಾಡಿದವರು, ಅವರು ಹೇಳುವುದು ನಮಗಿಂದು ಮುಖ್ಯವೆನ್ನಿಸುತ್ತದೆ. ಎಲ್‌ಐಸಿಯಲ್ಲಿ ಇದ್ದ ಜಿ. ರಾಜಶೇಖರ್ ಹೇಳುವುದು ಮುಖ್ಯ ಅನ್ನಿಸುತ್ತದೆ.

ನಮ್ಮಿಬ್ಬರಿಗೂ ಓದುಗರಿಗೂ ಮುಖ್ಯವಾದ ಮತ್ತೊಂದು ಸಂಗತಿಯಿದೆ. ನೀವು ಎಡಪಂಥೀಯರ ಕೆಲಸಗಳಲ್ಲಿ ಹೆಚ್ಚು ಆಸಕ್ತಿ ಇದ್ದವರು. ಕಳೆದ 25–30 ವರ್ಷಗಳಲ್ಲಿ ಸಾಹಿತ್ಯ ಎನ್ನುವ ಸಂಸ್ಥೆ ಏನು ಮಾಡಬಹುದು ಎನ್ನುವ ಒಂದು ಸಂಗತಿಯಲ್ಲೇ ಬದಲಾವಣೆಯಾಗಿದೆ.